
ನೂರು ರೂಪಾಯಿ ಕೊಟ್ಟರೂ ಲೆಕ್ಕ ಕೇಳುವ ಈ ಪದ್ಧತಿಗೆ ಇಂದೇ ಕೊನೆ ಹಾಡಿಬಿಡುವ... ಕಳೆದ ತಿಂಗಳ ಹಣವೇ ಅವನಿಗೆ ಕೊನೆಯ ಕಂತಾಗಲಿ ಎನ್ನುತ್ತ ಸಂದೀಪ ಸ್ನಾನಕ್ಕೆ ಹೋದಾಗ ತನ್ನ ಬ್ಯಾಂಕ್ ಪಾಸ್‌ಪುಸ್ತಕ ಹಾಗೂ ಚೆಕ್ ಪುಸ್ತಕಗಳನ್ನು ಎತ್ತಿಟ್ಟುಕೊಂಡಳು. ಸಂಜೆ ಬ್ಯಾಂಕಿಂದ ಬಂದು ಹುಡುಕುತ್ತಿದ್ದ ಸಂದೀಪನಿಗೆ ನೀವು ಹುಡುಕುತ್ತಿರುವುದು ನನ್ನ ಹತ್ರ ಇದೆ. ಇನ್ನು ಮುಂದೆ ನನ್ನ ಹತ್ರವೇ ಇರುತ್ತವೆ ಅವು. ಮನೆ ಅಗತ್ಯಗಳಿಗೆ ನಾನೇ ನನ್ನ ಹಣ ತೆಗೆದು ಕೊಡುವೆ ನಿಮಗೆ ಎಂದು ಕಡ್ಡಿ ಮುರಿದ ಹಾಗೆ ಹೇಳಿ ಒಳಬಂದಿದ್ದಳು. ಊಹೆ ಮೀರಿದ ಈ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬೇಕು ಎಂದು ತಿಳಿಯದ ಸಂದೀಪ ಕೂಗಾಡಿ ಕಿರುಚಾಡಿ ಅವಳ ಚಂಡಿಕೆ ಹಿಡಿದು ದರದರ ಹೊರಗೆ ಎಳೆತಂದು ಹೊರಗಿನ ಟೇಬಲ್ಲಿಗೆ ಬಡಿದಿದ್ದ... ಕೈಗೆ ಪೆಟ್ಟಾಗಿ ಕುಕ್ಕರಿಸಿ ಕುಳಿತವಳಿಗೆ ಮನಸೋಇಚ್ಛೆ ಬಡಿಯಲು ಇನ್ನೇನನ್ನೋ ಹುಡುಕುತ್ತಿದ್ದ ಅವನನ್ನು ನೋಡಿ ಅವಳಲ್ಲಿದ್ದ ಬಸವಣ್ಣಿ ಜಾಗ್ರತವಾದಳು... ರುಬ್ಬುವ ಕಲ್ಲಿನ ಮೂಲೆಗಿದ್ದ ಕಡಿಯೋ ಕತ್ತಿ ಎತ್ತಿಕೊಂಡು ಬಂದವಳೇ ಅವನಿಗೆದುರಾಗಿ ಎದೆಗೆ ಎದೆ ಕೊಟ್ಟು ನಿಂತು, "ಹೊಡಿತಿಯೇನೋ ನಾರ್ದಾ... ನಾ ಮಾಡಿದ್ದು ತಿಂದುಂಡು ಸೊಕ್ಕು ಹೆಚ್ಚಾಗಿಯಲ್ವಾ ನಿಂಗೆ... ಬಾರೋ ನೋಡೇಬಿಡ್ತೀನಿ" ಎಂದು ಅವನ ಬಲಗೈ ಹಿಡಿದುಕೊಂಡಳು... ಕಟಕಟ ಹಲ್ಲುಕಡಿಯುತ್ತ ಸಾಕ್ಷಾತ್ ಮಾಕಾಳಿ ರೂಪು ತಾಳಿ ನಿಂತ ಅವಳ ಕೈ ಮುಷ್ಟಿ ಬಿಡಿಸುವುದಾಗಲಿ, ಕತ್ತಿ ಕಸಿದುಕೊಳ್ಳುವುದಾಗಲಿ ಸಂದೀಪನಿಂದ ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗದೇ ಭಯವಾಯಿತು... ಇಷ್ಟೂ ದಿನದ ಒಟ್ಟೂ ಅಸಹಾಯಕತೆಯೇ ಒಟ್ಟಾಗಿ ಶಕ್ತಿಯ ಅವತಾರವಾದ ಹಾಗೆ ಆಕೆ ನಿಂತಿದ್ದಳು.

ಕೊನೆಗೊಮ್ಮೆ ಅವನನ್ನು ಎಡಗಾಲಲ್ಲಿ ಒದ್ದು ಅದೇ ಅವತಾರದಲ್ಲಿ ದಣಪೆಯಂಚಿಗೆ ನಂದಿಬಟ್ಟಲ ಗಿಡದ ಹತ್ತಿರ ಓಡಿ ಬಂದು ಗಟ್ಟಿಯಾಗಿ ಕೂಗತೊಡಗಿದಳು.

'ಎಲ್ಲ ಅದಲು ಬದಲಾಗಲಿ ಕೊಂಚ ದಿನ...'

'ನಿನ್ನ ಪಾಸ್‌ಬುಕ್ಕು, ಚೆಕ್‌ಬುಕ್ಕು ನಾನು ಇಟ್ಕೋತೇನೆ ನಾಳೆಯಿಂದ...'

'ನಿನ್ನ ಆರಾಮ ಕುರ್ಚಿಯ ಮೇಲೆ ಕಾಲಮೇಲೆ ಕಾಲು ಹಾಕಿ ನಾನು ಕುಳಿತುಕುಳ್ಳುವೆ ಇವತ್ತಿಂದ...'



'ಹದಿನಾಲ್ಕು ವರ್ಷ ನಾನು ಮಾಡಿದ ಚಾಕರಿಯನ್ನು ಬರೇ ಮೂರು ದಿನ ಮಾಡು ಸಾಕು ನೀನು ನೋಡುವ...'

ಓಣಿಯಲ್ಲಿ ತಿರುಗಾಡುತ್ತಿದ್ದ ಒಂದಿಬ್ಬರು ಹತ್ತಾರಾದರು...

ಕಿರುಚುತ್ತ ಜೊತೆಗೆ ಕಣ್ಣಲ್ಲಿ ಧಾರಾಕಾರ ನೀರೂ ಹರಿಸುತ್ತ ನಿಂತ ಅವಳಿಗೆ ಕಿವಿಯಾದ ಜನ ನೂರಾರಾದರು... ಆಚೀಚಿನ ಮನೆಯ ಅಂಗಳದಲ್ಲಿ ನಿಂತ ಜನವೂ ಮೌನವಾಗಿ ಕೇಳುತ್ತಲುಳಿದರು...

ಕಿರುಚಿ ಸುಸ್ತಾಗಿ ಕುಸಿದು ಕುಳಿತವಳಿಗೆ ನೀರು ತಂದು ಕುಡಿಸಿದರು... 'ಹೌದಂತೆ... ಹತ್ತು ರೂಪಾಯಿ ಬೇಕಿದ್ದರೂ ಕೈ ಚಾಚಬೇಕಂತೆ' ಮಾತು ಗುಸುಗುಸು ಕೇಳಿಬರತೊಡಗಿದವು.

ಇಷ್ಟಾಗುವಾಗ, ಹೆಂಗಸು! ಊಟ ತಿಂಡಿ ಬಿಟ್ರೆ ಅವರಿಗೆ ಮತ್ತೇನು ಅಗತ್ಯಗಳು ಇರ್ತವೆ? ಹೆಂಗಸರು ಮನೆ ಕೆಲಸ, ನೌಕರಿ, ಅಡುಗೆ, ಮಕ್ಕಳ ಜೋಪಾನ ಮಾಡಿಕೊಂಡು ಮನೇಲಿ ಚಂದಗೆ ಇರಬೇಕು, ಅಂತಹ ಎಲ್ಲ ಮನೆಗಳೂ ಸದಾಕಾಲಕ್ಕೆ ಸುಭಿಕ್ಷವಾಗಿ ಇರುತ್ತವೆ ಎಂದುಕೊಂಡು, ಇಲ್ಲಿಯವರೆಗೆ ಹಾಗೇ ನಡೆದುಕೊಂಡು, ಕಟ್ಟೆ ಮೇಲೆ ಸ್ನೇಹಿತರೊಂದಿಗೆ ಹೇಳಿಕೊಂಡು ತಿರುಗುತ್ತಿದ್ದ ಸಂದೀಪ ಒಳಕೋಣೆ ಮೂಲೆ ಸೇರಿ ಕುಸಿದು ಕುಳಿತಿದ್ದ. ●